ದಿನಾಂಕಃ**22-02-2023** ಸಿ.ಸಿ.**95/2020** ಪಿ ಡಬ್ಲ್ಯೂ **1**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

**<u>ಆರೋಪಿ ಪರವಾಗಿ ಪಾಟೀ ಸವಾಲು ಶ್ರೀ ಹೆಚ್ ಡಿ ವಕೀಲರಿಂದಃ</u>**

ನನ್ನ ತಂದೆ ತೀರಿಕೊಂಡಿದ್ದಾರೆ ಎನ್ನುವುದು ಸರಿ. 06-06-2019 ರಲ್ಲಿ ನನ್ನ ತಂದೆ ತೀರಿಕೊಂಡರು. ಈ ಪ್ರಕರಣವನ್ನು ದಾಖಲಿಸುವ ಕಾಲಕ್ಕೆ ನನ್ನ ತಂದೆ ಇರಲಿಲ್ಲ. ಆರೋಪಿಯ ಪರಿಚಯ ನನಗೆ ಇದೆ. ಕಳೆದ 7-8 ವರ್ಷಗಳಿಂದ ಅವರ ಪರಿಚಯ ನನಗೆ ಇದೆ. ನಮ್ಮ ಮಾವನವರ ಜಮೀನಿನ ಪಕ್ಕ ಆರೋಪಿಯ ಜಮೀನಿದೆ ಆದ್ದುದರಿಂದ ಅವರ ಪರಿಚಯ ಆಯಿತು. ನನ್ನ ತಾಯಿಯ ತವರೂರು ಈಸೂರು. ನಾನು ಹುಟ್ಟಿದಾಗಿನಿಂದಲೂ ನಮ್ಮ ಮಾವನ ಊರಿಗೆ ಹೋಗಿ ಬರುತ್ತಿದ್ದೇನೆ. ಆರೂೕಪಿಯ ಪರಿಚಯ ನನಗೆ ಇಲ್ಲದೇ ಇದ್ದರೂ ಸಹ ಅವರ ಪರಿಚಯ ನನಗೆ ಇದೆ ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗಿಂತ ತುಂಬಾ ನನ್ನ ತಂದೆಯವರಿಗೆ ಆರೋಪಿಯ ಪರಿಚಯ ಇದೆ. ನನ್ನ ತಂದೆ ಜೊತೆ ಆರೋಪಿ ಮಾತನಾಡುತ್ತಿದ್ದರು. ನನ್ನ ಮಾವ ಎಂದರೆ ಮಾಸಪಳ್ಳಿ ಅಶೋಕಪ್ಪ. 7-8 ವರ್ಷಗಳಿಂದ ನಮ್ಮ ಮಾವನ ಮನೆಗೆ ಆರೋಪಿ ಬಂದು ಹೋಗುತ್ತಿದ್ದರು. ಆರೂೕಪಿ ಹಲವಾರು ಬಾರಿ ನನ್ನ ತಂದೆಯವರಿಗೆ ಹಣವನ್ನು ಕೇಳುತ್ತಿದ್ದ. ಟ್ರ್ಯಾಕ್ಟರ್ ಅನ್ನು ತೆಗೆದುಕೊಂಡ ಕಾರಣ ಅವರು ಕೇಳಿದಾಗ ಕೊಡಲಿಲ್ಲ ಮತ್ತೆ ನಾನು ಕೊಟ್ಟೆ. ನನಗೆ ಪರಿಚಯ ಆಗಿ 2-3 ವರ್ಷಗಳ ನಂತರ ಆರೋಪಿ ನನ್ನ ತಂದೆಯನ್ನು ಹಣ ಕೇಳಲು ಪ್ರಾರಂಭಿಸಿದರು. ಆ ರೀತಿ ನನ್ನ ತಂದೆಯನ್ನು 3-4 ಬಾರಿ ಕೇಳಿರಬಹುದು. ಈ ವ್ಯವಹಾರಕ್ಕಿಂತ ಪೂರ್ವದಲ್ಲಿ ಆರೋಪಿ ನಾವು ಹಣ ಕೊಡುವುದಾಗಲಿ ಮತ್ತು ಅವರಿಂದ ಹಣ ತೆಗೆದುಕೊಳ್ಳುವುದಾಗಲಿ ಮಾಡಿರಲಿಲ್ಲ.

ನಮ್ಮ ಮನೆಯಲ್ಲಿ ಆರೋಪಿ ನನ್ನ ತಂದೆಯನ್ನು ಹಣ ಕೇಳಿದರು. ಆಗ ನಾನು ಇದ್ದೆ. ಆ ಸಮಯದಲ್ಲಿ ನನ್ನ ತಾಯಿ ಸಹ ಇದ್ದರು. ಬೇರೆಯವರು ಇರಲಿಲ್ಲ. ನನಗೆ ದಿನಾಂಕ ನೆನಪಾಗುತ್ತಿಲ್ಲ. ಜುಲೈ ತಿಂಗಳು 2019 ರಲ್ಲಿ ಆರೋಪಿ ನಮ್ಮ ಮನೆಗೆ ಬಂದಿದ್ದರು. ಆ ದಿನ ಮಧ್ಯಾಹ್ನ 4.00 ಗಂಟೆ ಸಮಯಕ್ಕೆ ನಮ್ಮ ಮನೆಗೆ ಬಂದಿದ್ದರು. ಅದೇ ದಿನ ನನ್ನ ತಂದೆ ಆರೋಪಿಗೆ 6 ಲಕ್ಷ 50 ಸಾವಿರ ರೂ.ಗಳನ್ನು ಕೊಟ್ಟರು. ನಗದು ರೂಪದಲ್ಲಿ ನನ್ನ ತಂದೆ ಹಣ ಕೊಟ್ಟರು.

ನನ್ನ ತಂದೆಯವರಿಗೆ ಸುಮಾರು 7 ಎಕರೆ ಜಮೀನು ಇದೆ. 7 ಎಕರೆಯಲ್ಲಿ ಅಡಿಕೆ, ಭತ್ತ ಮತ್ತು ಶುಂಠಿ ಬೆಳೆಯುತ್ತೇವೆ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ನಾನು ಹೇಳಿರುವ ಶುಂಠಿ, ಅಡಿಕೆ ಹಾಗೂ ಭತ್ತವಾಗಲಿ ಬೆಳೆಯುತ್ತೇವೆಂದು ನಮೂದಾಗಿಲ್ಲ ಎಂದರೆ ಸಾಕ್ಷಿ ನಾವು ಬಳೆಯುತ್ತೇವೆ ಎನ್ನುತ್ತಾರೆ. ಶುಂಠಿ, ಅಡಿಕೆ ಹಾಗೂ ಭತ್ತ ಬೆಳೆಯುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮಗೆ 7 ಎಕರೆ ಜಮೀನು ಇದೆ ಎಂದು

ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯ ಹಿಸ್ಸೆಗೆ 2 ¼ ಎಕರೆ ಬಂದಿದೆ. ಸಾಕ್ಷಿ ಮುಂದುವರೆದ ನನ್ನ ತಾತನ ಹೆಸರಿನಲ್ಲಿರುವ ಖಾತೆ ಇನ್ನು ಬದಲಾವಣೆಯಾಗಿಲ್ಲ. ಅವರೆಲ್ಲಾ ಹೆಸರಿನಲ್ಲಿರುವ ಆಸ್ತಿಗಳನ್ನು ನಾವೇ ವ್ಯವಸಾಯ ಮಾಡುತ್ತೇವೆ. ನಾವು ಮತ್ತು ನನ್ನ ಚಿಕ್ಕಪ್ಪನವರು ಒಟ್ಟಿಗೆ ಇದ್ದೇವೆ. ಬೇರೆಯವರು ಹಿಸ್ಸೆ ಕೊಡದೇ ಪ್ರತ್ಯೇಕವಾಗಿದ್ದಾರೆ.

500 ರೂ. ಮುಖ ಬೆಲೆಯ ನೋಟುಗಳನ್ನು ನನ್ನ ತಂದೆ ಆರೋಪಿಗೆ ಕೊಟ್ಟರು. 6 ಲಕ್ಷ 50 ಸಾವಿರ ರೂ. ಗಳನ್ನು ಸಹ 500 ರೂ. ಮುಖ ಬೆಲೆಯ ನೋಟುಗಳು. ನನ್ನ ತಂದೆ ಆ ದಿನ 500 ರೂ ಮುಖ ಬೆಲೆಯ 13 ಕಟ್ಟುಗಳನ್ನುಕೊಟ್ಟರು. 13 ಕಟ್ಟುಗಳನ್ನು ಆರೋಪಿ ಆ ದಿನ ಎಣಿಸಿಕೊಂಡರು. 500 ರೂ. ಮುಖ ಬೆಲೆಯ 13 ಕಟ್ಗುಳನ್ನು ಕೊಟ್ಟವವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ, ನನ್ನ ತಂದೆ, ಮತ್ತು ನನ್ನ ನಡುವೆ ಯಾವುದೇ ನಗದು ವ್ಯವಹಾರ ನಡೆಯಲಿಲ್ಲ ಎಂದರೆ ಸರಿಯಲ್ಲ. 3 ತಿಂಗಳೊಳಗೆ ನಾನು ಹಣವನ್ನು ವಾಪಸ್ಸು ಕೊಡುತ್ತೇನೆಂದು ಆರೋಪಿ ಹೇಳಿದ್ದರು. ಈ ಎಲ್ಲಾ ವ್ಯವಹಾರಗಳು ನನ್ನ ಸಮಕ್ಷಮದಲ್ಲೇ ನಡೆಯಿತು.

3 ತಿಂಗಳು ಆದ ನಂತರ ನಾನು ಆರೋಪಿಯನ್ನು ನನ್ನ ತಂದೆಯವರು ಹಣ ವಾಪಸ್ಸು ಕೊಡುವಂತೆ ಕೇಳಿದರು. ಆರೋಪಿಯ ಮನೆಯಲ್ಲೇ ನನ್ನ ತಂದೆ ಹಣ ವಾಪಸ್ಸು ಕೊಡುವಂತೆ ಕೇಳಿದ್ದರು. ನನ್ನ ತಂದೆಯವರು ಕೇಳಿದ ದಿನಾಂಕ ನೆನಪಿಲ್ಲ. ನನ್ನ ತಂದೆ ಇವತ್ತು ಆರೋಪಿಯನ್ನು ಹಣ ಕೇಳುತ್ತೇನೆಂದು ಹೋಗಿದ್ದರು. 3 ಬಾರಿ ನನ್ನ ತಂದೆಯವರು ಆರೋಪಿಯನ್ನು ಹಣ ವಾಪಸ್ಸು ಕೊಡುವಂತೆ ಕೇಳಿದ್ದರು. ನಾನು ಆರೋಪಿಯನ್ನು ಹಣ ವಾಪಸ್ಸು ಕೊಡುವಂತೆ ಕೇಳಲಿಲ್ಲ. 2019 ನವೆಂಬರ್ ತಿಂಗಳಲ್ಲಿ ಆರೋಪಿ ನಮಗೆ ಚೆಕ್ ಕೊಟ್ಟರು. ಆರೋಪಿ ಕೊಟ್ಟ ದಿನಾಂಕದಂದೇ ಚೆಕ್ ಅನ್ನು ಬ್ಯಾಂಕ್ ಗೆ ಹೋಗಿ ಹಾಜರುಪಡಿಸಿರುತ್ತೇವೆ. ನಾನು ಮತ್ತು ನನ್ನ ತಂದೆಯವರು ಇಬ್ಬರು ಬ್ಯಾಂಕಿಗೆ ಹೋಗಿದ್ದೆವು. ನಮ್ಮ ಮನೆಗೆ ಬಂದು ಆರೋಪಿ ಚೆಕ್ ಕೊಟ್ಟರು. ಆಗ ನಾನು, ನನ್ನ ತಂದೆ ಹಾಗೂ ಆರೋಪಿ 3 ಜನ ಇದ್ದೆವು. ನಿಪಿ-1 ರಲ್ಲಿರುವ ಸಹಿಗೂ ಮತ್ತು ಅರೋಪಿ ಸಲ್ಲಿಸಿದ ವಕಾಲತ್ ನಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎನ್ನುವುದು ಸರಿ. ಚೆಕ್ಕಿನಲ್ಲಿರುವ ಸಹಿಯನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಎದುರೇ ಆರೋಪಿ ಸಹಿ ಮಾಡಿರುತ್ತಾರೆ.

ಈಸೂರು ಗ್ರಾಮದ ಸುವರ್ಣಮ್ಮ ನನಗೆ ಪರಿಚಯ ಇಲ್ಲ. ನನ್ನ ತಾಯಿ ಮತ್ತು ಲೀಲಾವತಿ ಅಕ್ಕ ತಂಗಿಯರು. ಲೀಲಾವತಿ ಮತ್ತು ಸುವರ್ಣಮ್ಮ ಸ್ನೇಹಿತರು ಎನ್ನುವುದು ನನಗೆ ಗೊತ್ತಿಲ್ಲ. ಸುವರ್ಣಮ್ಮನವರು ಲೀಲಾವತಿಯ ಮೂಲಕ ನನ್ನ ತಂದೆಯನ್ನು ಪರಿಚಯ ಮಾಡಿಕೊಂಡು ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆಂದರೆ ಸರಿಯಲ್ಲ.

ಆರೋಪಿಯ ಚೆಕ್ ಗಳು ಕಳೆದು ಹೋಗಿದೆ ಎಂದು ಅವರು ಪೊಲೀಸರಿಗೆ ದೂರು ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸುವರ್ಣಮ್ಮ ಮತ್ತು ಆರೋಪಿ ಗಜೇಂದ್ರ ಶುಂಠಿ ಬೆಳೆಯನ್ನು ಬೆಳೆಯುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿಯ ಚೆಕ್ ಅನ್ನು ಸುವರ್ಣಮ್ಮನವರು ಕದ್ದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಆ ಕಾರಣದಿಂದಲೇ ಆರೋಪಿ ತನ್ನ ಖಾತೆಯನ್ನು ಮುಕ್ತಾಯಗೊಳಿಸಿದರು ಎನ್ನುವುದು ನನಗೆ ಗೊತ್ತಿಲ್ಲ. ಆ ರೀತಿ ಕದ್ದ ಚೆಕ್ ಗಳಲ್ಲಿ ಒಂದನ್ನು ಬ್ಯಾಂಕಿಗೆ ಹಾಜರುಪಡಿಸಿ ಸುವರ್ಣಮ್ಮನವರು ಆರೋಪಿ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದರು, ಅದರಲ್ಲಿ ಆರೋಪಿಗೆ ಬಿಡುಗಡೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಅದೇ ರೀತಿ ಎ ಹೆಚ್ ಸಿದ್ದವೀರಪ್ಪರವರಿಗೆ ಒಂದು ಚೆಕ್ ಕೊಟ್ಟು ಅವರ ಮೂಲಕ ಒಂದು ಪ್ರಕರಣ ದಾಖಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲೂ ಸಹ ಆರೋಪಿಗೆ ಬಿಡುಗಡೆಯಾಗಿದೆ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.